# ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ, ಧಾರವಾಡ

## ಸಿಸಿ ನಂ.1717/2021

ಪಿರ್ಯಾದುದಾರರುಃ ಪಿ ಎಸ್ ಐ , ಗ್ರಾಮೀಣ ಪೋಲಿಸ ಠಾಣೆ, ಧಾರವಾಡ.

**ವಿರುದ್ಧ**

ಆರೋಪಿತರುಃ
1. ಕಲ್ಪನಾ ಜಗನ್ನಾಥ ಗೋಡಿ
2. ಜಗನ್ನಾಥ ಕೃಷ್ಣಪ್ಪ ಗೋಡಿ
4. ಕೃಷ್ಣಮ್ಮ ಚಂದ್ರಶೇಖರ ಸೋಮರೆಡ್ಡಿ

-ಃ **ದೋಷಾರೋಪಣೆ** ಃ-

ಶ್ರೀ **ಅಮೋಲ್ ಜಯಕುಮಾರ ಹಿರಿಕುಡೆ,** ನಾಲ್ಕನೇ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ಧಾರವಾಡ, ಆದ ನಾನು, ಆರೋಪಿತರಾದ

1. ಕಲ್ಪನಾ ಜಗನ್ನಾಥ ಗೋಡಿ
2. ಜಗನ್ನಾಥ ಕೃಷ್ಣಪ್ಪ ಗೋಡಿ
4. ಕೃಷ್ಣಮ್ಮ ಚಂದ್ರಶೇಖರ ಸೋಮರೆಡ್ಡಿ

ಆದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ ,

ಧಾರವಾಡ ಗ್ರಾಮೀಣ ಪೋಲಿಸ ಠಾಣೆಯ ಸರಹದ್ದಿನ 2 ನೇ ಆರೋಪಿಯಾದ ನೀವು ಡಿ ಎ ಆರ್ ಧಾರವಾಡದಲ್ಲಿ ಎ ಹೆಚ್ ಸಿ 180 ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದು ತಾತ್ಕಾಲಿಕ ಪೋಲಿಸ ತರಬೇತಿ ಶಾಲೆ ಧಾರವಾಡದಲ್ಲಿ ತರಬೇತುದಾರನಾಗಿ ಕರ್ತವ್ಯ ಮಾಡುತ್ತಿದ್ದು, ಆರೋಪಿತರಾದ ನೀವೆಲ್ಲರೂ ಕೂಡಿಕೊಂಡು ತರಬೇತಿ ಶಾಲೆಯಲ್ಲಿರುವ ಪೋಲಿಸ ಪ್ರಶಿಕ್ಷಣಾರ್ಥಿಗಳಿಂದ ಹಣವನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ 3 ನೇ ಆರೋಪಿಯಾಗಿದ್ದ ಗೀರಿಜಾ ನಾಗಶೆಟ್ಟಿ ಯವರ ಹೆಸರಿನಲ್ಲಿ ಚಾಸಾ11 ನೇದವರಾದ ಭೂಷಣ ಹಲಕೇರಿ ರವರ ಅಂಗಡಿಯಲ್ಲಿ ವಡಾಫೋನ ಸಿಮ್ ನಂ.9538291722 ನೇದ್ದನ್ನು ಖರೀದಿ ಮಾಡಿದ್ದು ಅಲ್ಲದೇ 2 ನೇ ಆರೋಪಿಯಾದ ನೀನು ತರಬೇತಿ ನೀಡುವ ಪ್ರಶಿಕ್ಷಣಾರ್ಥಿಗಳ ಮೊಬೈಲ್ ನಂಬರಗಳು ಹಾಗೂ ಹೆಸರುಗಳ ಮಾಹಿತಿಯನ್ನು 1 ನೆ ಆರೋಪಿಗೆ ನೀಡಿದ್ದು ,

ಅದೇ ರೀತಿ 1 ನೇ ಆರೋಪಿಯಾದ ನೀನು 2 ನೇ ಆರೋಪಿ ನೀಡಿದ ಪ್ರಶಿಕ್ಷಣಾರ್ಥಿಗಳ ಮೊಬೈಲ ನಂಬರಗಳನ್ನು ಹಾಗೂ ಅವರ ಹೆಸರುಗಳನ್ನು 3 ನೇ ಆರೋಪಿಯ ಹೆಸರಿನಲ್ಲಿ ತೆಗೆದುಕೊಂಡ ಸಿಮ್ ನ ಮೂಲಕ ಪಿರ್ಯಾದುದಾರರಾದ ಮಂಜುನಾಥ ಮಾರುತಿ ಇವರ ಮೊಬೈಲಗೆ ದಿಃ 18.05.2018 ರಂದು ಮದ್ಯಾಹ್ನ 12 ಗಂಟೆ 11 ನಿಮಿಷ 32 ಸೆಕೆಂಡಿಗೆ ಕಾಲ್ ಮಾಡಿದ್ದು ಹಾಗೂ ನಂತರ ಪದೇ ಪದೇ ಅಂದರೇ 12 ಗಂಟೆ 19 ನಿಮಿಷ 46 ಸಕೆಂಡಿಗೆ ಮತ್ತು 12 ಗಂಟೆ 41 ನಿಮಿಷ 40 ಗಂಟೆಗೆ ಮಾಡಿದ್ದು, ಅದೇ ರೀತಿ ಪ್ರಶಿಕ್ಷಣಾರ್ಥಿಯಾದ ಚಾಸಾ-6 ರವರ ಮೊಬೈಲ ನಂಬರಿಗೂ ಸಹ ದಿಃ 17.05.2018 ರಂದು 1 ಗಂಟೆ 36 ನಿಮಿಷ 59 ಸಕೆಂಡಗೆ ಮತ್ತೇ ಸಂಜೆ 8 ಗಂಟೆ 6 ನಿಮಿಷ 9 ಸಕೆಂಡಗೆ , ದಿಃ 20.05.2018 ರಂದು 8 ಗಂಟೆ 9 ನಿಮಿಷ 23 ಸೆಕೆಂಡಿಗೆ , 11 ಗಂಟೆ 26 ನಿಮಿಷ 41 ಗಂಟೆಗೆ , 6 ಗಂಟೆ 4 ನಿಮಿಷ 51 ಸೆಕೆಂಡಗೆ ಹಾಗೂ 6 ಗಂಟೆ 19 ನಿಮಿಷ 48 ಸೆಕೆಂಡಿಗೆ ಅದೇ ರೀತಿ ಚಾಸಾ8 ಮತ್ತು 9 ರವರಿಗೆ ಕೂಡಾ ಸಹ ಪದೇ ಪದೇ ಕರೆ ಮಾಡಿ ಚಾಸಾ10 ರವರಾದ ಶ್ರೀಮತಿ ಸಂಗೀತಾ ಎಸ್ ಪಿ ಧಾರವಾಡ ರವರ ಹೆಸರನ್ನು ದುರ್ಬಳಕೆ ಮಾಡಿಕೊಂಡು ಸದರಿಯವರ ಪರಿಚಯದವರಿಗೆ ವೈದ್ಯಕೀಯ ಖರ್ಚಿಗೆ ಅಂತಾ ಪ್ರಶಿಕ್ಷಣಾರ್ಥಿಗಳಿಂದ ತಲಾ ರೂ.2000/- ಸಂಗ್ರಹಿಸಿ ಕೊಡುವಂತೆ ಒತ್ತಾಯಿಸಿದ್ದಲ್ಲದೇ ಹಣವನ್ನು ಸಂಗ್ರಹಿಸಿ ಕೊಡಲಿಲ್ಲ ವೆಂದರೆ ನೌಕರಿಗೆ ತೊಂದರೆ ಕೊಡುವುದಾಗಿ ಬೆದರಿಕೆ ಹಾಕಿದ್ದು ನೀವು **ಭಾರತೀಯ ದಂಡ ಸಂಹಿತೆ ಕಲಂ.384 ಮತ್ತು 419 ಸಹ ಕಲಂ.34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ ಎಂದು ಆಪಾದಿಸಲಾಗಿದೆ.

( ಸದರಿ ಆಪಾದನೆಯನ್ನು ಆರೋಪಿತರಿಗೆ ಓದಿ ತಿಳಿಸಿ, ಅವರು ಕೊಟ್ಟ ಸಂಪೂರ್ಣ ಹಾಗೂ ಸರಿಯಾದ ಉತ್ತರವನ್ನು ಅಭಿಲೇಖಿಸಿಕೊಳ್ಳಲಾಗಿದೆ.)

ದಿನಾಂಕ 21.09.2021.

ಧಾರವಾಡ.

4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ,. ಧಾರವಾಡ.

**-ಃ ಆಪಾದನೆ ಃ-**

**1 ನೇ ಆರೋಪಿಃ-ಕಲ್ಪನಾ ಜಗನ್ನಾಥ ಗೋಡಿ**

ಪ್ರಶ್ನೇಃ- ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ ?

ಉತ್ತರಃ-

ಪ್ರಶ್ನೆಃ ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರಃ

**2 ನೇ ಆರೋಪಿಃ-ಜಗನ್ನಾಥ ಕೃಷ್ಣಪ್ಪ ಗೋಡಿ**

ಪ್ರಶ್ನೇಃ- ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ ?

ಉತ್ತರಃ-

ಪ್ರಶ್ನೆಃ ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರಃ

**4 ನೇ ಆರೋಪಿಃ-ಕೃಷ್ಣಮ್ಮ ಚಂದ್ರಶೇಖರ ಸೋಮರೆಡ್ಡಿ**

ಪ್ರಶ್ನೇಃ- ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ ?

ಉತ್ತರಃ-

ಪ್ರಶ್ನೆಃ ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರಃ

( ಸದರಿ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ತಿಳಿಸಿ, ಅವರು ಕೊಟ್ಟ ಸಂಪೂರ್ಣ ಹಾಗೂ ಸರಿಯಾದ ಉತ್ತರವನ್ನು ಅಭಿಲೇಖಿಸಿಕೊಳ್ಳಲಾಗಿದೆ.)

ದಿನಾಂಕ 21.09.2021.

ಧಾರವಾಡ.

**( ಅಮೋಲ್ ಜಯಕುಮಾರ ಹಿರಿಕುಡೆ)**
4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ,. ಧಾರವಾಡ.